**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.591/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಣ್ಣೇಶ | ಪ್ರಾಸಾಃ 1 |
| ತಂದೆಯ/ಗಂಡನ ಹೆಸರು | : | ಪುಟ್ಟಪ್ಪ | ಚಾಸಾಃ 1 |
| ವಯಸ್ಸು | : | 37 ವರ್ಷ | |
| ಕೆಲಸ | : | ಗ್ರಾಮ ಸಹಾಯಕ | ಸಾ ಪ್ರ ಬೋ |
| ವಾಸ | : | ಕಾಲ್ಕೆರೆ | ದಿಃ04.01.2025 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ಈ ಪ್ರಕರಣದ ಐದು ಮಂದಿ ಆರೋಪಿತರು ಗೊತ್ತು. ಚಾಸಾ-4 ನನ್ನ ತಾಯಿ. ಚಾಸಾ-5 ನಮ್ಮ ಪಕ್ಕದ ಮನೆಯವರು. ದಿಃ 30.12.2019 ರಂದು ಬೆಳಗ್ಗೆ 9.30 ಕ್ಕೆ ನಾನು ದನ ಕಟ್ಟುವ ಕೊಟ್ಟಿಗೆ ಮನೆಯಿಂದ ವಾಸದ ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ ಆಗ ರಾಜಪ್ಪ, ಪ್ರವೀಣ, ಗೀತಮ್ಮ, ವೀರೇಶ ಮತ್ತು ಶೋಭಾ ರವರು ಸೇರಿಕೊಂಡು ನನಗೆ ಹಳೇ ವೈಷಮ್ಯದಿಂದ ಬೈಯುತ್ತಿದ್ದರು. ಆಗ ನಾನು ಏಕೆ ಬೈಯುತ್ತೀರ ಎಂದು ಕೇಳಿದಾಗ ನನಗೆ ಎದುರು ಮಾತನಾಡುತ್ತೀಯ ಎಂದು ರಾಜಪ್ಪ ಕೈಯಿಂದ ನನ್ನ ಕೆನ್ನೆಗೆ ಮತ್ತು ಮುಖಕ್ಕೆ ಹೊಡೆದಿರುತ್ತಾರೆ. ಪ್ರವೀಣ ಮತ್ತು ವೀರೇಶ ಸೇರಿಕೊಂಡು ಕೈಯಿಂದ ಮೈ ಕೈಗೆ ಹೊಡೆದಿರುತ್ತಾರೆ. ಪ್ರವೀಣ ಅಲ್ಲೇ ಬಿದ್ದಿದ್ದ ನ್ಯಾಯಾಲಯದ ಮುಂದಿರುವ ಕೋಲನ್ನು ತೆಗೆದುಕೊಂಡು ನನ್ನ ಮುಖಕ್ಕೆ ಮತ್ತು ತಲೆಗೆ ಹೊಡೆದಿರುತ್ತಾರೆ. ರಾಜಪ್ಪ ಅಲ್ಲೇ ಬಿದ್ದಿದ್ದ ನ್ಯಾಯಾಲಯದ ಮುಂದಿರುವ ಕಲ್ಲನ್ನು ತೆಗೆದುಕೊಂಡು ನನ್ನ ಸೊಂಟಕ್ಕೆ ಮತ್ತು ಕಾಲಿಗೆ ಹೊಡೆದಿರುತ್ತಾರೆ. ಗೀತಮ್ಮ ಮತ್ತು ಶೋಭಾರವರು ಸಹ ಕೈ ಕಾಲುಗಳಿಂದ ನನ್ನ ಮೈಕೈಗೆ ಹೊಡೆದಿರುತ್ತಾರೆ. ಜಗಳ ಬಿಡಿಸಲು ಬಂದ ನನ್ನ ತಾಯಿಯಾದ ಚಾಸಾ-4 ರವರು ಸಹ ಶೋಭಾ ಮತ್ತು ಗೀತಮ್ಮ ರವರು ಕೈ ಮತ್ತು ಕಾಲುಗಳಿಂದ ಹೊಡೆದಿರುತ್ತಾರೆ. ನಂತರ ಚಾಸಾ-5 ರವರು ಬಂದು ಗಲಾಟೆ ಬಿಡಿಸಿರುತ್ತಾರೆ. ನಂತರ ಎಲ್ಲಾ ಆರೋಪಿತರು ನೀನು ಒಬ್ಬನೇ ಸಿಗು ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಮತ್ತು ನನ್ನ ತಾಯಿ ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿರುತ್ತೇವೆ. ನಂತರ ವೈದ್ಯರು ನಮ್ಮನ್ನು ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ದಿಃ 31.12.2019 ರಂದು ನಾನು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೊಲೀಸರು ಬಂದು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು, ನಿಪಿ-1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1

(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ದೊಣ್ಣೆ ಮತ್ತು ಕೋಲನ್ನು ನೋಡಿ ಗುರುತಿಸಿದ್ದು, ಕ್ರಮವಾಗಿ ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಕಾಲಾವಕಾಶ ಕೋರಿದ್ದು, ರೂ.250/- ಖರ್ಚಿನೊಂದಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ